*ಜಿ.ವಿ.ಪ್ರಭು, ಗಾಯತ್ರಿನಗರ*
*ರಾಜಕೀಯ ನಾಯಕರ ಹೊಟ್ಟೆ ಕಡಿಮೆ ಯಾವಾಗ ಆಗುತ್ತೆ?*



ತಮ್ಮ ಮಕ್ಕಳ ಹೊಟ್ಟೆ ಅವರದಕ್ಕಿಂತಲೂ ದೊಡ್ಡದಾದಾಗ!

*ಪಿ.ಎನ್.ಶ್ರೀವತ್ಸ, ಬೆಂಗಳೂರು*
*ಯಾವಾಗ 60 ಆಗಿ ನಿವೃತ್ತಿ ಕಾಣುತ್ತೇನೋ ಎನ್ನಿಸಿಬಿಟ್ಟಿದೆಯಲ್ಲಾ...?!*
ಹೆಚ್ಚೇನೂ ಕಾಯುವುದು ಬೇಕಿಲ್ಲ. 59 ವರ್ಷ, 364 ದಿವಸ ಆದರಾಯ್ತು!

*ಕೆ.ಮೈಥಿಲಿಕೃಷ್ಣ, ಬೆಂಗಳೂರು*
*ನಾವು ತೀರಿಕೊಂಡಮೇಲೂ ನಮ್ಮ ಹೆಸರು ಎಂದೆಂದೂ ಉಳಿಯಲು ಏನು ಮಾಡಬೇಕು?*
ಬೋಫರ್ಸ್, ವಾಟರ್‌ಗೇಟ್‌ನಂತಹ ಹಗರಣದಲ್ಲಿ ತೊಡಗಿಕೊಳ್ಳಬೇಕು!

*ಜೆ.ಪ್ರದೀಪಕುಮಾರ, ಹೂವಿನಹಡಗಲಿ*
*ಹಳೆಯ ವಸ್ತುವಿನಲ್ಲಿರುವ ಒಳ್ಳೆಯದನ್ನು ಜನರು ಗುರುತಿಸುವುದಿಲ್ಲವಲ್ಲಾ?*
ಏಕಿಲ್ಲ? ಹಳೆ ಆಸ್ತಿ, ಹಳೆ ಚಿನ್ನಕ್ಕೆ ಜನ ಇಂದೂ ಮುಗಿಬೀಳುವರು!

*ಎಂ.ಎಸ್.ಸುಕನ್ಯಾಬಾಬು, ಬಳ್ಳಾರಿ*
*ದೇವರು ಹೆಣ್ಣಿಗೆ ಏಕೆ ಕಣ್ಣಲ್ಲಿ ಬಹಳ ನೀರು ಕೊಟ್ಟಿದ್ದಾನೆ?*



ಬಹಳಷ್ಟು ಹೆಣ್ಣುಗಳು ಕೈ ತೊಳೆದುಕೊಳ್ಳಬೇಕಾದುದೇ ಅದರಲ್ಲಾದ್ದರಿಂದ!

*ಸುನಂದಮ್ಮ, ಸಿರೇಕೊಳಂ*
*ಇ-ಮೇಲ್ ಪ್ರಪಂಚದಲ್ಲಿ ಫೀಮೇಲ್‌ನ ಸ್ಥಾನಮಾನಗಳೇನು?*
ಮೇಲ್‌ಗಿಂತಲೂ ಮೇಲಿನ ಫೀ ಸಂಪಾದಿಸುವಂತಹುದು!

*ಪಾರ್ವತಿಪತಿ, ಬೆಂಗಳೂರು*
*ವೈದ್ಯರೂ, ಯಮನೂ ಷಡ್ಡಕರೇ?*
ಯಮ ವೈದ್ಯನ ತಮ್ಮ; ವೈದ್ಯ ಬಿಟ್ಟುಕೊಟ್ಟ ಅಸ್ಥಿಯನ್ನು ಅವನು ಕೊಂಡೊಯ್ಯುತ್ತಾನೆ!

*ಸಾವಿತ್ರಮ್ಮ ಕೆ ವಿಭೂತಿ, ಹರಿಹರ*
*ಎಲ್ಲ ರೋಗಕ್ಕೂ ಮದ್ದುಂಟು, ಆದರೆ ಈ ದೇಶಕ್ಕೆ ಹಿಡಿದ ಜಾತಿರೋಗಕ್ಕೆ ಮದ್ದಿಲ್ಲ ಅಲ್ಲವೇ?*
ಮದ್ದಿಲ್ಲವೆಂದಿಲ್ಲ, ಮದ್ದಿತ್ತರೆ ತಮ್ಮ ಬೇಳೆ ಬೇಯದೆಂದು ಸರ್ವ ಪಕ್ಷಗಳೂ ಆ ರೋಗವನ್ನು ಬೆಳೆಸುವ ವೈರಸ್‌ಗಳಾಗಿವೆ ಅಷ್ಟೆ.

*ಎ.ಕೆ.ಪಟ್ಟಾಭಿ, ಬೆಂಗಳೂರು*
*ಹೆಂಗಸರಿಗೆ ಹಾಸ್ಯಪ್ರಜ್ಞೆ ಎಂಬುದು ತುಂಬಾ ಕಡಿಮೆ ಎನ್ನುವ ಮಾತು ಇದೆಯಲ್ಲಾ?*
ನಿಜಾಂಶವೇನೆಂದರೆ ಅವರ ಉತ್ತಮ ಹಾಸ್ಯವನ್ನು ಜೀರ್ಣಿಸಿಕೊಳ್ಳುವ ಸ್ಥೈರಣೆ, ತಾಕತ್ತು ಗಂಡಿಗಿಲ್ಲವಂತೆ!

*ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ*
*ಗುರುವಿಲ್ಲದೆ ಗುರಿ ಮುಟ್ಟಲು ಸಾಧ್ಯವೆ?*
ಮುಟ್ಟಬಹುದು, ಆದರೆ ಸರ್ಟಿಫಿಕೇಟ್ ಸಿಗುವುದಿಲ್ಲ ಎಂದನಾ ಏಕಲವ್ಯ!

*ಎಸ್.ಜಿ.ರಾಜಶೇಖರ ರೆಡ್ಡಿ, ಹಿಂದೂಪುರ*
*ಮುಕ್ಕೋಟಿ ದೇವಾನುದೇವತೆಗಳಿಗೆ ಇಂತಿಂಥದ್ದೇ ರೂಪ ಕೊಟ್ಟವರು ಯಾರು?*
ಕವಿಗಳು, ಕಲ್ಕುಟಿಗರು, ಚಿತ್ರಕಾರರು!

*ಸೊಂ.ನಾ.ಶ್ರೀಧರಮೂರ್ತಿ, ದಾವಣಗೆರೆ*
*ಸಲಿಂಗಕಾಮ ಕಾನೂನುಬದ್ಧ ಎಂಬ ತೀರ್ಪಿನ ಬಗ್ಗೆ ನಿಮ್ಮ ಅನಿಸಿಕೆ ಏನು?*
ಕಾನೂನಿನ ಪ್ರಕಾರ ಎಲ್ಲರಿಗೂ ಮಣ್ಣು ತಿನ್ನಲು ಸಹ ಹಕ್ಕಿದೆ; ತಿನ್ನಬೇಕಾಗಿಲ್ಲ ಅಷ್ಟೆ!

*ಎಂ.ಜಿ.ನೇಹರ್ವಣೆ, ಬಳ್ಳಾರಿ*
*ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕರ, ರಾಜಕೀಯಕ್ಕೆ ಬರುವುದು...?*
ಅಯೋಗ್ಯರಿಗೆ ಲಾಭಕರ!

*ಅಕ್ಷಯ ಜೈನ್, ಹೂವಿನಹಡಗಲಿ*
*ಪ್ರೀತಿ ಉನ್ಮಾದಚಂದ್ರಿಕೆಗೆ ಅರಳಿಕೊಳ್ಳುವ ದಳವೆ?*
ಛೆ! ಕರ್ಷಣಾಲಾಪದ ಉತ್ಕರ್ಷವದು!

*ಎಂ.ಕೆ.ರವಿಕಾಂತ, ತುಮಕೂರು*
*ಅರ್ಥಂಬರ್ಥ ತಿಳಿದವರು ತಾವು ಬುದ್ಧಿಜೀವಿಗಳೆಂದು ಸ್ವಯಂ ಘೋಷಿಸಿಕೊಳ್ಳುತ್ತಿರುವರಲ್ಲಾ...?*
ಯಾರೋ ಅವರನ್ನು ಕುರಿತು ಆ ಜೀವಿ ಬುದ್ಧೂ ಎಂದಿದ್ದನ್ನು ಇವರು ಅಪಾರ್ಥ ಮಾಡಿಕೊಂಡು ಹಾಗೆಂದಿರುವರಂತೆ!

## ಬಹುಮಾನಿತ ಪ್ರಶ್ನೆ

*ರಾಜ ಮರೋಳ, ಹೂವಿನಹಡಗಲಿ, ಬಳ್ಳಾರಿ*
*ನಿಜವಾದ ಸತ್ಯವಂತರು ಯಾರು?*
ಸುಳ್ಳು ಹೇಳಲು ಬೇಕಾದಷ್ಟು ಬುದ್ಧಿ, ಜ್ಞಾಪಕಶಕ್ತಿ ಇಲ್ಲದವರು!

*ಬಸವರಾಜ ಬೂದಿಹಾಳ, ಗೋವಾ*
*ಕನ್ನಡ ನೆಲದಲ್ಲೇ, ಕನ್ನಡಿಗರಿಂದಲೇ ಹುಟ್ಟಿದ ಈ ನ್ಯಾಯಾಲಯಕ್ಕೆ ಕನ್ನಡವನ್ನೇ ಕಡೆಗಣಿಸುವಂತಹ ಅಧಿಕಾರವನ್ನು ಯಾರು ಕೊಟ್ಟರು?*
ಕನ್ನಡಿಗರಾದ ನಾವೇ! ನಮ್ಮ ಮಕ್ಕಳೇ ಕನ್ನಡದಲ್ಲಿ ನುಡಿ ಎಂದರೆ ಕಾನ್ವೆಂಟಿಗೆ ನಡಿ ಎನ್ನುವ ಮಹಾನ್ ಭಾಷಾಭಿಮಾನಿಗಳು ನಾವು!

*ಶೃತಿ ಶ್ರೇಯಸ್, ಮೈಸೂರು*
*ಮಧ್ಯಮ, ಕೆಳಮಧ್ಯಮ ವರ್ಗದ ಜನರನ್ನು ಪಾತಾಳಕ್ಕೆ ತಳ್ಳಿದ ಎಂ.ಎನ್.ಸಿ. ನೌಕರರು ಈಗ ಫುಟ್‌ಪಾತ್ ಮೇಲಿನ ವಸ್ತುಗಳಿಗೆ ಮುಗಿಬೀಳುತ್ತಿದ್ದಾರಲ್ಲ ಸಾರ್?*
ಹೌದು, ಈಗ ಎಂಎನ್‌ಸಿ ಎಂದರೆ ಮಧ್ಯೆಬೀದಿಯಲ್ಲಿ ನಿಂತೇ ಚೌಕಾಸಿ ಎಂದರ್ಥವಂತೆ!

*ಪ್ರದೀಪ ಸಿ ಚಿತ್ರಗಾರ, ಬಾದಾಮಿ*
*ಹಣವಿದ್ದೂ, ಸಾಮ್ರಾಜ್ಯವಿದ್ದೂ ಉತ್ತರಕುಮಾರನ ಬುದ್ಧಿ. ಹಣ, ಸಾಮ್ರಾಜ್ಯವಿಲ್ಲದೆ ಕರ್ಣನ ಬುದ್ಧಿ ಇರುವವರಿಗೆ ನಿಮ್ಮ ಸಂದೇಶ?*
ಅರ್ಜುನನಂತಹವರಿಗೆ ಸಿಗಬೇಡಿ. ಕಾದೋ, ಕಾಡಿಯೋ ಭವಿಷ್ಯಕ್ಕೆ ಭಂಗ ತಂದಾನು!

*ಮಹಾವೀರ ಕಾಸರ, ಚನ್ನಗಿರಿ*
*ರಾಕ್ಷಸನಿಗೂ, ರಾಜಕಾರಣಿಗೂ ಏನು ವ್ಯತ್ಯಾಸ?*
ಪಕ್ಷಾಂತರ, ಲಂಚಗುಳಿತನ, ಅನುವಂಶಿಕ ರಾಜಕೀಯ ಇವಾವುವೂ ರಾಕ್ಷಸರಿಗೆ ತಿಳಿದಿರಲಿಲ್ಲ!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*
*ಯಾವುದೇ ಚಳವಳಿ ನಡೆದರೂ ಕೆಂಪು ಬಸ್‌ಗಳ ಮೇಲೆ ಕಲ್ಲು, ಬೆಂಕಿ ಹಚ್ಚುವುದು ನಡೆದಿದೆಯಲ್ಲಾ...?*



ಅದರಲ್ಲಿ ಹೆಚ್ಚು ಜನ ಇರುವರಲ್ಲ! ಸರ್ಕಾರಕ್ಕೆ ಸಂಪಿನ ಶಾಖ ತಟ್ಟಬೇಕಾದರೆ ಜನತೆಗೆ ಷಾಕ್ ಹೆಚ್ಚಬೇಕಂತೆ!

■ ರಾಮ್